ವಿಜಯವಾಣಿ ನಂ 1 ಕನ್ನಡ ದಿನಪತ್ರಿಕೆ

# ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಸಾಹಿತ್ಯ ಪೂರಕ

■ ವಿಜಯವಾಣಿ ಸುದ್ದಿಜಾಲ ಧಾರವಾಡ

ಪ್ರಸ್ತುತ ಸಮಾಜದಲ್ಲಿ ಮಕ್ಕಳ ವ್ಯಕ್ತಿತ್ವ ವಿಕಸನಕ್ಕಾಗಿ ಬುದ್ಧಿಮಾತು ಹೇಳುವ ಬದಲು ಸಾಹಿತ್ಯದ ಮೂಲಕ ಮಾರ್ಗದರ್ಶನ ಮಾಡಿದರೆ ಹೇಳಬೇಕಾದ ವಿಚಾರ ಮಕ್ಕಳ ಮನಸಿನಲ್ಲಿ ದೀರ್ಘಕಾಲ ಉಳಿಯುತ್ತದೆ. ಸಾಹಿತ್ಯದ ಸ್ವಾರಸ್ಯಕರ ಸಂಗತಿ, ಭಾಷೆಯ ಲಯ, ಸೌಂದರ್ಯ, ಆಕರ್ಷಣೆಗಳ ಮೂಲಕ ಸಂದೇಶ ಕಳುಹಿಸಿದರೆ ಮಕ್ಕಳಲ್ಲಿ ಸಾಹಿತ್ಯದ ಆಸಕ್ತಿ ಹೆಚ್ಚಲಿದೆ ಎಂದು ಆಕಾಶವಾಣಿಯ ನಿವೃತ್ತ ಅಧಿಕಾರಿ ಡಾ. ಬಸು ಬೇವಿನಗಿಡದ ಹೇಳಿದರು.

ನಗರದ ಮಾಳಮಡ್ಡಿ ಕೆ.ಇ. ಬೋರ್ಡ್ ಶಾಲೆಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಕೆ.ಇ. ಬೋರ್ಡ್ ಸಂಸ್ಥೆಯ ಸಹಯೋಗದಲ್ಲಿ ಶನಿವಾರ ಏರ್ಪಡಿಸಿದ್ದ ಬಾಲ ಸಾಹಿತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಉತ್ತಮ ಸಾಹಿತ್ಯ ಕೃತಿಗಳನ್ನು ಓದುತ್ತ ಸಂಸ್ಕೃತಿಯ ಅರಿವು ಹೆಚ್ಚಿಸಿಕೊಳ್ಳಬೇಕು. ಸಮಕಾಲೀನ ಬದುಕಿನಲ್ಲಿನ ಒಳ್ಳೆಯ ಅಂಶ ಗಣನೆಗೆ ತೆಗೆದುಕೊಂಡು, ಮಕ್ಕಳ ಸಣ್ಣಪುಟ್ಟ ಸಾಧನೆಗಳನ್ನೂ ಪ್ರೋತ್ಸಾಹಿಸಿ ಅವರ ಆತ್ಮವಿಶ್ವಾಸ ಹೆಚ್ಚಿಸಬಹುದು ಎಂದರು.

ಸಾಹಿತಿ ಸುನಂದಾ ಕಡಮೆ ಮಾತನಾಡಿ, ಮಕ್ಕಳು ತಮ್ಮ ಹಕ್ಕುಗಳು, ಸುರಕ್ಷತೆ, ಸವಲತ್ತುಗಳು, ಕಾನೂನುಗಳ ಬಗ್ಗೆ ತಿಳಿಯುವುದು ಅಗತ್ಯ. ಶಿಕ್ಷಕರು ಸಾಹಿತ್ಯದ ಕೃತಿಗಳನ್ನು ಓದಲು ಮಕ್ಕಳಲ್ಲಿ ಪ್ರೇರೇಪಿಸಿ ಭವಿಷ್ಯದ ಬಗೆಗೆ ಸಕಾರಾತ್ಮಕವಾಗಿ ಯೋಚಿಸುವಂತೆ ಮಾಡಬೇಕು. ಯಾವುದೇ ಸಾಹಿತ್ಯವು ಮನುಷ್ಯನ ತಿಳಿವಳಿಕೆ ಹೆಚ್ಚಿಸುವ ಉದ್ದೇಶ ಹೊಂದಿರುವುದರಿಂದ ಶೈಕ್ಷಣಿಕವಾಗಿ ಕಲಿಯುವ ಅಂಶಗಳು ಇದ್ದೇ ಇರುತ್ತವೆ. ಬಾಲ್ಯದಿಂದಲೇ ಸಾಹಿತ್ಯ ಕೃತಿಗಳ ಬಗ್ಗೆ ಮಕ್ಕಳಲ್ಲಿ ಒಲವು ಮೂಡಿಸಬೇಕು ಎಂದರು.

ಸಂಸ್ಥೆಯ ಕಾರ್ಯದರ್ಶಿ ಡಿ.ಎಸ್. ರಾಜಪುರೋಹಿತ, ಬಾಲ ಸಾಹಿತಿಗಳಾದ ನೇಹಾ ರಾಮಾಪುರ, ವಿದ್ಯಾ ಭಗವತಿ ಮಾತನಾಡಿದರು. ಎನ್.ಎಸ್. ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು. ಸುನೀತಾ ಪುರೋಹಿತ, ಮಕ್ಕಳ ಸಾಹಿತಿ ಡಾ. ಆನಂದ ಪಾಟೀಲ, ಡಾ. ಶರಣಮ್ಮ ಗೋರೆಬಾಳ, ಚನ್ನಪ್ಪ ಅಂಗಡಿ, ಎಂ.ಎ. ಅಳವಂಡಿ, ಪ್ರಕಾಶ ಕಡಮೆ, ಶ್ರೀಧರ ಉದಗಟ್ಟಿ, ವೈ.ಜಿ. ಭಗವತಿ, ಡಾ. ಲಿಂಗರಾಜ ರಾಮಾಪುರ, ಶ್ರೀಧರ ಗಸ್ತಿ, ಸ್ಮಿತಾ ಕುಲಕರ್ಣಿ, ಇತರರಿದ್ದರು. ಎನ್.ಎಸ್. ಗೋವಿಂದರೆಡ್ಡಿ ಸ್ವಾಗತಿಸಿದರು. ಹರ್ಷಾಚಾರ್ಯ ಮತ್ತು ವಿಜಯಲಕ್ಷ್ಮೀ ನಿರೂಪಿಸಿದರು. ಸಂಗಮೇಶ ಹಡಪದ ವಂದಿಸಿದರು.




ಧಾರವಾಡದಲ್ಲಿ ಏರ್ಪಡಿಸಿದ್ದ ಬಾಲ ಸಾಹಿತಿ ಕಾರ್ಯಕ್ರಮವನ್ನು ಡಾ. ಬಸು ಬೇವಿನಗಿಡದ ಉದ್ಘಾಟಿಸಿದರು. ಸುನಂದಾ ಕಡಮೆ, ಡಿ.ಎಸ್. ರಾಜಪುರೋಹಿತ, ಡಾ. ಆನಂದ ಪಾಟೀಲ, ಚನ್ನಪ್ಪ ಅಂಗಡಿ, ನೇಹಾ ರಾಮಾಪುರ, ವಿದ್ಯಾ ಭಗವತಿ ಇದ್ದರು.